# ಶಿಕ್ಷಣದಲ್ಲಿನ ವಿನೂತನ ಕಾರ್ಯಕ್ರಮದಿಂದ ಕಲಿಕೆ: ಲೋಕ್ ಜಂಬಿಶ್ – ಎಲ್ಲರಿಗೂ ಶಿಕ್ಷಣಕ್ಕಾಗಿ ಜನಾಂದೋಲನ[1]

ಶೋಭಿತಾ ರಾಜಗೋಪಾಲ್ ಮತ್ತು ಶೋಭಾ ಎಲ್. ಕವೂರಿ




## ಪರಿಚಯ

ರಾಜಸ್ಥಾನ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಆವಿಷ್ಕಾರಗಳು ನಡೆದಿವೆ. ಇದು ಶಿಕ್ಷಣ ವ್ಯವಸ್ಥೆಯೊಳಗಿನ ದೂರ ಇರಿಸುವ ರೀತಿನೀತಿಗಳು ಮತ್ತು ಅಂತಹ ಕೆಲವು ನ್ಯೂನತೆಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದ್ದವು. ಅವಕಾಶ ವಂಚಿತ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಹಾಗೂ ಶೈಕ್ಷಣಿಕ ಯೋಜನೆಯಲ್ಲಿ ಸುಧಾರಣೆ ತರುವ ಮೂಲಕ ಶಿಕ್ಷಣ ನೀಡುವಿಕೆಯನ್ನು ಉತ್ತಮಗೊಳಿಸಲು ಅರ್ಥಪೂರ್ಣವಾದ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸುವ ಹಲವು ಸಾಧ್ಯತೆಗಳನ್ನು ಇವು ಪ್ರದರ್ಶಿಸಿವೆ.

ಲೋಕ್ ಜಂಬಿಶ್ ಅಥವಾ 'ಎಲ್ಲರಿಗೂ ಶಿಕ್ಷಣಕ್ಕಾಗಿ ಜನಾಂದೋಲನ'ಕ್ಕೆ ಸ್ವೀಡಿಶ್ ಇಂಟರ್ ನ್ಯಾಶನಲ್ ಡೆವಲಪ್ಮೆಂಟ್ ಏಜೆನ್ಸಿ(SIDA–ಸಿಡಾ)ದ ಬೆಂಬಲದೊಂದಿಗೆ 1992ರಲ್ಲಿ ಭಾರತ ಸರ್ಕಾರ ಮತ್ತು ರಾಜಸ್ಥಾನ ರಾಜ್ಯ ಸರ್ಕಾರ ಚಾಲನೆ ನೀಡಿತು. ಇದು ರಾಜಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪ್ರಮುಖ ಗುರಿಯೊಂದಿಗೆ ಪ್ರಾರಂಭವಾಯಿತು. 1990ರ ಈ ಯೋಜನಾ ದಾಖಲೆಗಳಲ್ಲಿ ಹೇಳಿರುವಂತೆ, ''ಪ್ರತಿ ಮಗುವಿಗೂ ಮೂಲಭೂತ ಶಿಕ್ಷಣದ (1ರಿಂದ 8ನೇನೆಯ ತರಗತಿಯವರೆಗೆ) ಪ್ರವೇಶವನ್ನು ಖಾತರಿಪಡಿಸಲು ಮುಖ್ಯವಾಹಿನಿ ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು, ಪ್ರಾಯೋಗಿಕಗೊಳಿಸುವುದು, ವೇಗವನ್ನು ವರ್ಧಿಸುವುದು ಮತ್ತು ರೂಪಾಂತರ- ಗೊಳಿಸುವುದು' ಇದರ ಉದ್ದೇಶವಾಗಿದೆ.

'ಲೋಕ್' ಎನ್ನುವುದು ಹಿಂದಿ ಪದವಾಗಿದ್ದು ಅದರ ಅರ್ಥ ಜನರು ಎಂದು ಮತ್ತು ''ಜಂಬಿಶ್' ಎನ್ನುವುದು ಉರ್ದು ಭಾಷೆಯ ಪದವಾಗಿದ್ದು ಅದರ ಅರ್ಥ ಆಂದೋಲನ ಎಂದಾಗಿದೆ. ಇವೆರಡೂ ಪದಗಳು ಒಟ್ಟುಗೂಡಿದ 'ಲೋಕ್ ಜಂಬಿಶ್' ಎಂದರೆ, ಜನಾಂದೋಲನ ಅಥವಾ ಜನರಿಗಾಗಿ ಆಂದೋಲನ ಅಥವಾ ಚಳುವಳಿ ಎಂದಾಗಿದೆ. ಶಿಕ್ಷಣವನ್ನು ಪ್ರತಿ ಹಂತದಲ್ಲೂ ಜನರ ಸಕ್ರಿಯ ಮತ್ತು ನಿರಂತರ ಭಾಗವಹಿಸುವಿಕೆಯನ್ನು ಖಾತರಿಪಡಿಸುವ ಒಂದು ಜನಾಂದೋಲನವನ್ನಾಗಿ ಮಾಡಲು ಲೋಕ್ ಜಂಬಿಶ್ ಪ್ರಯತ್ನಿಸಿತು (ಚೌಧರಿ, 2003).

ಲೋಕ್ ಜಂಬಿಶ್ ಕಾರ್ಯಕ್ರಮವು ಸಮುದಾಯ ಹಾಗೂ ಶಿಕ್ಷಣ ಸೇವಾ ಪೂರೈಕೆದಾರರನ್ನು ಸಂಘಟಿಸುವ, ಪ್ರೇರೇಪಿಸುವ, ಮತ್ತು ಅವರಲ್ಲಿ ಶಕ್ತಿ ತುಂಬುವ ಉದ್ದೇಶದಿಂದ ಪ್ರಾರಂಭವಾಯಿತು. ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕ ಗುರಿಗಳನ್ನು ಸಾಧಿಸಲು ಪ್ರಯಾಸಪಡುತ್ತಿರುವ ರಾಜ್ಯವೊಂದರಲ್ಲಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪ್ರಸ್ತುತ ಶಿಕ್ಷಣ ವ್ಯವಸ್ಥೆಯನ್ನು ಚೇತರಿಸಿಕೊಳ್ಳುವಂತೆ ಮಾಡುವುದು ಬಹಳ ಮುಖ್ಯವಾದ ಒಂದು ಅಂಶವಾಗಿದೆ ಎಂಬ ದೃಢನಂಬಿಕೆಯ ಮೇಲೆ ಇದು ಆಧರಿತವಾಗಿತ್ತು. ಆದ್ದರಿಂದ ಇದು ಮಕ್ಕಳ ಶಾಲಾ ಪ್ರವೇಶ–ದಾಖಲಾತಿ ಮತ್ತು ಅವರು ಶಾಲೆಯಲ್ಲಿ ಉಳಿದು ಶಿಕ್ಷಣ ಮುಂದುವರೆಸುವುದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಮರುಪರಿಶೀಲಿಸುವತ್ತ ಗಮನಹರಿಸಿತು. ಯೋಜನೆಯ ಮೊದಲ ಹಂತವು 1992–94ರವರೆಗೆ ಎರಡು ವರ್ಷಗಳ ಅವಧಿಯದಾಗಿತ್ತು. ಈ ಹಂತದಲ್ಲಿ ಲೋಕ್ ಜಂಬಿಶ್ 25 ಶೈಕ್ಷಣಿಕ ಬ್ಲಾಕ್ ಗಳಲ್ಲಿ ಕೆಲಸ ಮಾಡಿತು. ಯೋಜನೆಯ ಎರಡನೆಯ ಹಂತದಲ್ಲಿ (1995–1998[2]) ಮೊದಲನೆಯ ಹಂತದಲ್ಲಿ ಪಡೆದುಕೊಳ್ಳಲಾದ ಸಾಧನೆಗಳನ್ನು ಮತ್ತಷ್ಟು ಬಲಪಡಿಸುವ ಮತ್ತು ಅವುಗಳನ್ನು ಕ್ರೋಢೀಕರಿಸುವುದರತ್ತ ಗಮನ ವಹಿಸಲಾಯಿತು. 1999ರ ನಂತರ ಲೋಕ್ ಜಂಬಿಶ್ ಒಂದು ಅನಿಶ್ಚಿತತೆಯ ಅವಧಿಯನ್ನು ಎದುರಿಸಿ ಅವನತಿಯತ್ತ ಸಾಗಿ ಅಂತಿಮವಾಗಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸುವುದರೊಂದಿಗೆ ಒಂದು ಬಗೆಯ ಕುಸಿತವನ್ನು ಅದು ಕಂಡಿತು.

ಈ ಲೇಖನವು ರಾಜಸ್ಥಾನದ ವಿವಿಧ ಜಿಲ್ಲೆಗಳಾದ್ಯಂತ ಶಿಕ್ಷಣವನ್ನು ಮಕ್ಕಳ ಸಮೀಪಕ್ಕೆ ತಂದು ಅವರ ಕೈಗೆಟಕುವಂತೆ ಮಾಡುವ ಪ್ರಯತ್ನದಲ್ಲಿ ಲೋಕ್ ಜಂಬಿಶ್ ಅಳವಡಿಸಿಕೊಂಡ ವಿಧಾನ ಮತ್ತು ಪ್ರಮುಖ ಕಾರ್ಯತಂತ್ರಗಳನ್ನು ಚರ್ಚಿಸುತ್ತದೆ. ಈ ಮಧ್ಯಪ್ರವೇಶಿಕೆಯಿಂದ ಲಭಿಸಿದ ಪಾಠಗಳನ್ನು ಕೂಡ ಈ ಲೇಖನವು ಎತ್ತಿಹಿಡಿಯುತ್ತದೆ.

## ವಿಧಾನ

ಲೋಕ್ ಜಂಬಿಶ್ ಅಳವಡಿಸಿಕೊಂಡ ಕಾರ್ಯವಿಧಾನವು ವಿಕೇಂದ್ರೀಕೃತವಾದುದಾಗಿದ್ದು ಒಮ್ಮತವನ್ನು ಕಟ್ಟುವ ಮತ್ತು ಪರಸ್ಪರ ಪಾಲುದಾರಿಕೆ ಹಾಗೂ ಭಾಗವಹಿಸುವಿಕೆಯಲ್ಲಿ ಯೋಜನೆಯನ್ನು ರೂಪಿಸಿ ಮೌಲ್ಯಮಾಪನವನ್ನು ನಡೆಸುವ ಹಾಗೂ ಗುಣಮಟ್ಟವನ್ನು ಸಾಧಿಸುವ ಬದ್ಧತೆಯ ತತ್ತ್ವವನ್ನು ಆಧರಿಸಿದ ಒಂದು ನಿಯೋಗದ ಮಾದರಿಯದಾಗಿತ್ತು (ಲೋಕ್ ಜಂಬಿಶ್ ಪರಿಷದ್ 1995).

ಲೋಕ್ ಜಂಬಿಶ್ ಒಂದು ಪ್ರಕ್ರಿಯೆ ಚಾಲಿತ ಯೋಜನೆಯಾಗಿದ್ದುದರಿಂದ ಅದರ ಫಲಿತಾಂಶಗಳು ಕಾರ್ಯಕ್ಷೇತ್ರದಲ್ಲಿ ಪ್ರಾರಂಭಿಸಲಾದ ಮತ್ತು ಪೂರ್ತಿಗೊಳಿಸಿದ ಪ್ರಕ್ರಿಯೆಗಳನ್ನೇ ನೇರವಾಗಿ ಅವಲಂಬಿಸಿಕೊಂಡಿರುತ್ತವೆ ಎಂಬ ಸ್ಪಷ್ಟವಾದ ತಿಳುವಳಿಕೆ ಇತ್ತು. ಆದ್ದರಿಂದ, ಶೈಕ್ಷಣಿಕ ಸೇವೆಯನ್ನು ವಿತರಿಸುವುದೊಂದರಲ್ಲೇ ಸಮಸ್ಯೆ ಇರುವುದಲ್ಲ ಬದಲಿಗೆ ಇರುವ ಸಾಮರ್ಥ್ಯಗಳೂ ಸರಿಯಾಗಿ ಬಳಕೆಯಾಗುತ್ತಿಲ್ಲ ಎನ್ನುವುದನ್ನು ಗುರುತಿಸಿರುವುದರ ಆಧಾರದ ಮೇಲೆ ಈ ಕಾರ್ಯಕ್ರಮದ

- ಲೇಖನದ ಕರಡು ಪ್ರತಿಗೆ ಪ್ರತಿಕ್ರಿಯೆ ನೀಡಿದ ಶೋಭಾ ಲೋಕನಾಥನ್ ಕಾವೂರಿಯವರಿಗೆ ನಾನು ಅಭಾರಿಯಾಗಿದ್ದೇನೆ.
- ಭಾರತದಲ್ಲಿ ನಡೆಸಲಾದ ಪರಮಾಣು ಪರೀಕ್ಷೆಯ ಹಿನ್ನೆಲೆಯಲ್ಲಿ SI___ ತನ್ನ ಬೆಂಬಲವನ್ನು 1998ರಲ್ಲಿ ಹಿಂತೆಗೆದುಕೊಂಡಿತು.

ನಿರ್ವಹಣೆಯ ಸಂರಚನೆಯು ಆಧಾರಗೊಂಡಿತ್ತು. ಇದಕ್ಕೆ ಶಾಲಾ ಪ್ರಕ್ರಿಯೆಗಳಲ್ಲಿ ಜನರ ಭಾಗವಹಿಸುವಿಕೆಯು ಕಡಿಮೆ ಮಟ್ಟದಲ್ಲಿರುವುದು ಸಾಕ್ಷಿಯಾಗಿದೆ.

ರಾಜ್ಯಮಟ್ಟದಲ್ಲಿ ಸ್ಥಾಪಿಸಲಾದ ಸ್ವತಂತ್ರವಾದ ಸ್ವಾಯತ್ತ ಸಂಸ್ಥೆ ಲೋಕ್ ಜಂಬಿಶ್ ಪರಿಷದ್ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಲೋಕ್ ಜಂಬಿಶ್ ಉದ್ಯೋಗಿಗಳನ್ನು ಮತ್ತು ತಂಡವನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಲಾಯಿತು. ಕೆಲವರನ್ನು ಶಿಕ್ಷಣ ಇಲಾಖೆಯಿಂದ ಈ ಕಾರ್ಯಕ್ರಮಕ್ಕೆ ನಿಯೋಜಿಸಲಾಯಿತು. ಅವರಲ್ಲಿ ಕೆಲವರು ಈಗಾಗಲೇ ರಾಜಸ್ಥಾನ ರಾಜ್ಯದಲ್ಲಿ ಅನುಷ್ಠಾನಗೊಳಿಸಲ್ಪಟ್ಟ ವಿನೂತನ ಕಾರ್ಯಕ್ರಮಗಳಾದ ವಿಮೆನ್ ಡೆವಲಪ್ಮೆಂಟ್ ಪ್ರಾಜೆಕ್ಟ್ (WDP) ಮತ್ತು ಶಿಕ್ಷಾಕರ್ಮಿ ಯೋಜನೆಗಳಲ್ಲಿ ಕೆಲಸ ಮಾಡಿದ ಅನುಭವ ಉಳ್ಳವರಾಗಿದ್ದರು. ಜೊತೆಗೆ ಇದು ಅಭಿವೃದ್ಧಿ ಕ್ಷೇತ್ರದಲ್ಲಿ ಕೆಲಸ ಮಾಡಿದ ಅನುಭವವನ್ನು ಹೊಂದಿರುವ ವ್ಯಕ್ತಿಗಳನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಂಡಿತು.

## ಗಮನ ವಹಿಸಲಾದ ಕ್ಷೇತ್ರಗಳು

ಪ್ರಕ್ರಿಯೆ ಆಧಾರಿತ ಕಾರ್ಯಕ್ರಮವಾಗಿರುವುದರಿಂದ ಕಾರ್ಯತಂತ್ರಗಳು ಸಮುದಾಯದ ಭಾಗವಹಿಸುವಿಕೆಯನ್ನು ಗರಿಷ್ಠಗೊಳಿಸುವುದರ ಮೇಲೆ ಕೇಂದ್ರೀಕೃತವಾಗಿದ್ದವು. ಪ್ರಮುಖವಾಗಿ ಗಮನ ವಹಿಸಲಾದ ಅಂಶಗಳೆಂದರೆ:

- ಶೈಕ್ಷಣಿಕ ಕಾರ್ಯನಿರ್ವಹಣೆ
- ಸಮುದಾಯದ ಭಾಗವಹಿಸುವಿಕೆ
- ಶಿಕ್ಷಣದ ಗುಣಮಟ್ಟ
- ಲಿಂಗ ಸಮಾನತೆಯನ್ನು ಖಾತರಿಪಡಿಸುವುದು

## ಶೈಕ್ಷಣಿಕ ಕಾರ್ಯನಿರ್ವಹಣೆ

ಲೋಕ್ ಜಂಬಿಶ್ ಕಾರ್ಯಕ್ರಮದ ನಿರ್ವಹಣೆಯ ತತ್ತ್ವವು ಕ್ರಾಂತಿಕಾರಕವಾಗಿದ್ದು, ಅದು ವಿಕೇಂದ್ರೀಕೃತ ವ್ಯವಸ್ಥೆಯತ್ತ ಹೊರಳಿಕೊಳ್ಳುವುದನ್ನು ಗುರುತಿಸಬಹುದಾಗಿದೆ. ಶೈಕ್ಷಣಿಕ ಕಾರ್ಯ ನಿರ್ವಹಣೆಗಾಗಿ ಕೆಳಹಂತದ ಹಲವು ನಿರ್ವಹಣಾ ಸಂರಚನೆಗಳನ್ನು ಸ್ಥಾಪಿಸಲಾಯಿತು. ಲೋಕ್ ಜಂಬಿಶ್ ನಲ್ಲಿ ಗ್ರಾಮವು ವಿಕೇಂದ್ರೀಕೃತ ಯೋಜನಾ ಘಟಕವಾಗಿದ್ದು, ಬ್ಲಾಕ್ (ತಾಲ್ಲೂಕಾ?) ವಿಕೇಂದ್ರೀಕೃತ ನಿರ್ವಹಣಾ ಘಟಕವಾಗಿತ್ತು. 25-30 ಗ್ರಾಮಗಳನ್ನು ಜೊತೆಗೂಡಿಸಿ ಶಾಲಾ ಸಮೂಹಗಳನ್ನು (ಕ್ಲಸ್ಟರ್) ರೂಪಿಸಲಾಗಿತ್ತು. ಪ್ರತಿ ಬ್ಲಾಕ್ ಅನ್ನು 5 ರಿಂದ 7 ಘಟಕಗಳನ್ನಾಗಿ ಅಡಕಗೊಳಿಸಲಾಗಿತ್ತು. ಈ ಘಟಕಗಳ ಹಂತದಲ್ಲಿನ ಕಾರ್ಯಕರ್ತರು ಗ್ರಾಮ ಮಟ್ಟದಲ್ಲಿ ಲೋಕ್ ಜಂಬಿಶ್ ನ ಗುರಿಗಳನ್ನು ಕ್ರಿಯೆಯ ಮೂಲಕ ಸಾಕಾರಗೊಳಿಸುವ ಜವಾಬ್ದಾರಿಯನ್ನು ಹೊಂದಿದ್ದರು.

ಮೊದಲಿಗೆ ಐದು ಬ್ಲಾಕ್ ಗಳನ್ನು ಗುರುತಿಸಲಾಯಿತು, ಅಲ್ಲಿ ಸಮುದಾಯದ ವೈವಿಧ್ಯಮಯ ಶೈಕ್ಷಣಿಕ ಅಗತ್ಯಗಳಿಗೆ ಪ್ರತಿಕ್ರಿಯಿಸುವ ತಳಮಟ್ಟದ ಯೋಜನಾ ಕಾರ್ಯವಿಧಾನಗಳನ್ನು ರೂಪಿಸಲು ಪ್ರಯತ್ನಿಸಲಾಯಿತು. ಈ ಪ್ರಕ್ರಿಯೆಗಳು ಪ್ರೇರಕ ದಳ (ಮೂರರಲ್ಲಿ ಒಂದು ಭಾಗದಷ್ಟು ಅಥವಾ ಅರ್ಧದಷ್ಟು ಮಹಿಳಾ ಸದಸ್ಯರನ್ನು ಒಳಗೊಂಡಿರುವ ಕೇಂದ್ರ ಸಮಿತಿ) ವನ್ನು ಜಾರಿಯಲ್ಲಿ ತರಲು, ಭವನ್ ನಿರ್ಮಾಣ್ ಸಮಿತಿ (ಕಟ್ಟಡ ನಿರ್ಮಾಣ ಸಮಿತಿ), ಗ್ರಾಮ ಶಿಕ್ಷಣ ಸಮಿತಿಗಳು (VEC–Village Education Committees) ಮತ್ತು ಸಂಘಟನೆ ಹಾಗೂ ಬೆಂಬಲಗಳಿಗಾಗಿ ಶಾಲಾ ಸಮುಚ್ಚಯಗಳ ಸಮೂಹ ಮಟ್ಟದ ಗುಂಪುಗಳನ್ನು ರಚಿಸುವುದಕ್ಕೆ ಇವು ಕಾರಣವಾದವು. ಬ್ಲಾಕ್ ಮಟ್ಟದಲ್ಲಿ ಖಂಡ್ ಸ್ತರೀಯ ಶಿಕ್ಷಣ್ ಪ್ರಬಂಧನ್ ಸಮಿತಿ (ಬ್ಲಾಕ್ ಮಟ್ಟದ ನಿರ್ವಹಣಾ ಸಮಿತಿ) ಯು ಯೋಜನೆಯ ನಿರ್ವಹಣೆಗೆ ಬೆಂಬಲ ಮೇಲ್ವಿಚಾರಣೆಯನ್ನೂ ನಡೆಸಿತು. ರಾಜ್ಯಮಟ್ಟದಲ್ಲಿ ಸಶಕ್ತ ಕಾರ್ಯಕಾರಿ ಸಮಿತಿಯು ತ್ರೈಮಾಸಿಕ ಆಧಾರದ ಮೇಲೆ ಪ್ರಗತಿಯನ್ನು ಪರಿಶೀಲಿಸಿತು (ರಾಮಚಂದ್ರನ್, 2016).

ಗೋವಿಂದ (1997) ಅವರು ಗಮನಿಸಿರುವಂತೆ ಲೋಕ್ ಜಂಬಿಶ್ "ಕೇಂದ್ರೀಕೃತ ಮತ್ತು ಶ್ರೇಣೀಕೃತ ಕಾರ್ಯವಿಧಾನಕ್ಕೆ ಪ್ರತಿಯಾದ' ಒಂದು ನಿರ್ವಹಣಾ ವ್ಯವಸ್ಥೆಯನ್ನು ಹೊಂದಿತ್ತು. ಶೈಕ್ಷಣಿಕ ಯೋಜನಾ ವಿಧಾನವು ವಿಕೇಂದ್ರೀಕೃತವಾಗಿದ್ದುದು ಮಾತ್ರವಲ್ಲದೆ, ಅದು ಆಲೋಚನೆಗಳನ್ನು ತಳಮಟ್ಟದಿಂದ ಮೇಲಕ್ಕೆ ಒಯ್ಯುವಂತಹ ಪ್ರಕ್ರಿಯೆಯನ್ನು ಒಳಗೊಂಡಿತ್ತು. ತಳಮಟ್ಟದ ಅನುಭವಗಳು ಲೋಕ್ ಜಂಬಿಶ್ ಕಾರ್ಯಕ್ರಮಗಳ ಅನುಷ್ಠಾನ ಮತ್ತು/ಅಥವಾ ಮಾರ್ಪಾಡುಗಳನ್ನು ರೂಪಿಸಲು ನೆರವಾದವು.

## ಸಮುದಾಯದ ಭಾಗವಹಿಸುವಿಕೆ

ಶಿಕ್ಷಣಕ್ಕಾಗಿ ಸಮುದಾಯವನ್ನು ಸಂಘಟಿಸುವುದು ಹಾಗೂ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಪ್ರೇರೇಪಣೆಗೊಳ್ಳುವಂತಹ ವಾತಾವರಣವನ್ನು ಸೃಷ್ಟಿಸುವುದು ಲೋಕ್ ಜಂಬಿಶ್ ನ ಪ್ರಧಾನ ಅಂಶಗಳಾಗಿದ್ದವು. ಮಾತ್ರವಲ್ಲದೆ, ದುಡಿಯುವ ಮಕ್ಕಳು, ಔಪಚಾರಿಕ ಶಾಲೆಗಳಿಗೆ ಹಾಜರಾಗಲು ಸಾಧ್ಯವಾಗದಿರುವ ಬಾಲಕಿಯರು, ವಲಸೆ/ಅಲೆಮಾರಿ ಕುಟುಂಬಗಳ ಮಕ್ಕಳು, ಬುಡಕಟ್ಟು ಜನಾಂಗದ ಮಕ್ಕಳು ಮತ್ತು ಅಂಗವಿಕಲ ಮಕ್ಕಳಿಗೆ ವಿಶೇಷ ವ್ಯವಸ್ಥೆಗಳನ್ನು ಮಾಡುವ ಅವಶ್ಯಕತೆಯನ್ನು ಯೋಜನಾ ದಾಖಲೆಯು ಅಂಗೀಕರಿಸಿತ್ತು. ಹೊರಗುಳಿದಿದ್ದ ಮಕ್ಕಳನ್ನು ಮುಖ್ಯವಾಹಿನಿಗೆ ಸೇರುವಂತೆ ಅನುವು ಮಾಡಿಕೊಡಲು ಒತ್ತು ನೀಡಲಾಗಿತ್ತು.

ಸಮುದಾಯಗಳನ್ನು ಸಂಘಟಿಸುವ ಪ್ರಯತ್ನದಲ್ಲಿ ಹಲವು ಪ್ರಮುಖ ಕಾರ್ಯತಂತ್ರಗಳು ರೂಪುಗೊಂಡವು. ಅವುಗಳೆಂದರೆ:

## ಶಾಲಾ ನಕ್ಷೆ ಮತ್ತು ಸೂಕ್ಷ್ಮ ಯೋಜನೆ

ರಾಜಸ್ಥಾನ ರಾಜ್ಯದಲ್ಲಿ ಸಾರ್ವತ್ರಿಕ ಶಿಕ್ಷಣಕ್ಕೆ ಮಕ್ಕಳು ಪ್ರವೇಶ ಪಡೆಯುವಲ್ಲಿ ಮತ್ತು ಅವರ ಭಾಗವಹಿಸುವಿಕೆಯನ್ನು ಖಾತರಿಪಡಿಸುವಲ್ಲಿ ವಿಫಲತೆ ಕಂಡುಬಂದಿದ್ದರಿಂದಾಗಿ ಪ್ರಾಥಮಿಕ ಶಾಲಾ ವ್ಯವಸ್ಥೆಯನ್ನು ಒದಗಿಸುವಲ್ಲಿನ ಕೇಂದ್ರೀಕೃತ ಯೋಜನಾ ವಿಧಾನದ ಕೆಲವು ದೌರ್ಬಲ್ಯಗಳನ್ನು ಸರಿಪಡಿಸಲು ಲೋಕ್ ಜಂಬಿಶ್ ಶಾಲಾ ನಕ್ಷೆಯನ್ನು ಒಂದು ಪರಿಣಾಮಕಾರಿ ಮಾಧ್ಯಮ ವನ್ನಾಗಿ ಬಳಸಲು ಆಯ್ಕೆಮಾಡಿಕೊಂಡಿತು (ಗೋವಿಂದ, 1998).

ತಮ್ಮ ಗ್ರಾಮಗಳಲ್ಲಿನ ಶೈಕ್ಷಣಿಕ ಸ್ಥಿತಿಗತಿಯ ವಿಶ್ಲೇಷಣೆ ಮಾಡುವಲ್ಲಿ ಮತ್ತು ಮಕ್ಕಳಿಗೆ ಪ್ರಾಥಮಿಕ ಶಾಲಾ ಪ್ರವೇಶದ ಅವಕಾಶವನ್ನು ಯೋಜಿಸುವಲ್ಲಿ ಸಮಾಜವನ್ನು ಸಂಘಟಿಸಿ ಸಮುದಾಯವನ್ನು ಒಳಗೊಳಿಸಲು ಶಾಲಾ ನಕ್ಷೆ (ಶಾಲಾ ಮನೋಚಿತ್ರಣ) ಯನ್ನು ಒಂದು ನಿರ್ಣಾಯಕ ಉಪಕರಣವನ್ನಾಗಿ ಬಳಸಿಕೊಳ್ಳಲಾಯಿತು. ಈ ಚಟುವಟಿಕೆಯು ಆಯಾ ಪ್ರದೇಶದಲ್ಲಿ ಅಲ್ಲಿನ ಮಕ್ಕಳಿಗೆ ಲಭ್ಯವಿರುವ ಶೈಕ್ಷಣಿಕ ಸೌಲಭ್ಯಗಳ ಸ್ಥಿತಿಗತಿಯನ್ನು ಕುರಿತು

ಅರಿಯಲು ಅನುವು ಮಾಡಿಕೊಟ್ಟಿತು. ಈ ಚಟುವಟಿಕೆಯ ಸಮಯದಲ್ಲಿ ಹಳ್ಳಿಯಲ್ಲಿರುವ ಪ್ರತಿಯೊಂದು ಮನೆಯನ್ನೂ ಕಣ್ಣಿಗೆ ಕಟ್ಟುವಂತೆ ನಕ್ಷೆಯಲ್ಲಿ ಚಿತ್ರಿಸಲಾಯಿತು. ಶಾಲೆಗೆ ಹೋಗುವ ವಯಸ್ಸಿನ ಮಕ್ಕಳ ವಿವರಗಳು ಮತ್ತು ಅವರ ಶಾಲಾ ದಾಖಲಾತಿಯ ಸ್ಥಿತಿಯನ್ನು ಸಂಗ್ರಹಿಸಿ ನಕ್ಷೆಯಲ್ಲಿ ಕಾಣಿಸಲಾಯಿತು ವಿವರಿಸಲಾಯಿತು. ಶಾಲೆಗಳು ಎಲ್ಲೆಲ್ಲಿವೆ ಮತ್ತು ಅವುಗಳು ಯಾವ್ಯಾವ ವ್ಯವಸ್ಥೆಗಳನ್ನು ಹೊಂದಿವೆ ಎಂಬುದನ್ನು ಕೂಡ ನಕ್ಷೆಯಲ್ಲಿ ಸೂಚಿಸಲಾಯಿತು.

ಸಮೀಕ್ಷೆಗಳು, ಶಾಲಾ ನಕ್ಷೆಯ ತಯಾರಿ ಮತ್ತು ಶಾಲಾ ಸುಧಾರಣಾ ಕಾರ್ಯಕ್ರಮಗಳಂತಹ ಶಾಲಾ ನಕ್ಷೆಯ ರಚನೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸಮುದಾಯದ ಸದಸ್ಯರ ಭಾಗವಹಿಸುವಿಕೆಯನ್ನು ಬಲಪಡಿಸಲು ನೆರವಾದವು. ಸಾಮೂಹಿಕವಾಗಿ ನಡೆಸಲಾದ ಈ ವಿಶ್ಲೇಷಣೆಯು ಗ್ರಾಮದಲ್ಲಿ ಅಸ್ತಿತ್ವದಲ್ಲಿರುವ ಶೈಕ್ಷಣಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಸಮುದಾಯಕ್ಕೆ ಸಹಾಯ ಮಾಡಿತು. ಶಾಲಾ ನಕ್ಷೆ ರೂಪಿಸುವ ಚಟುವಟಿಕೆಯಲ್ಲಿ ಬಾಲಕಿಯರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದರತ್ತ ಪ್ರಮುಖವಾಗಿ ಗಮನವಹಿಸಲಾಗಿತ್ತು. ಆರಂಭದಲ್ಲಿ, ಒಂದು ತಾಳಮೇಳವಿಲ್ಲದ ರೀತಿಯಲ್ಲಿ ಬಾಲಕಿಯರ ಸಂಖ್ಯೆಯು ಬಹಳ ಕಡಿಮೆ ಪ್ರಮಾಣದಲ್ಲಿ ವರದಿಗಳಲ್ಲಿ ಕಾಣಿಸಿಕೊಂಡಿತು; ಹೀಗೆ ‘ಕಾಣಿಸಲಾರದ’ ಮತ್ತು ‘ಅಡಗಿ’ ಹೋದ ಬಾಲಕಿಯರನ್ನು ಹುಡುಕಿ ತೆಗೆಯಲು ಪ್ರಜ್ಞಾಪೂರ್ವಕವಾದ ಪ್ರಯತ್ನಗಳನ್ನು ಮಾಡಬೇಕು ಎಂದು ನಂತರದಲ್ಲಿ ನಿರ್ಧರಿಸಲಾಯಿತು. ಜನವಸತಿ ಪ್ರದೇಶಗಳಲ್ಲಿ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಪ್ರವೇಶಾವಕಾಶಗಳು ದೊರೆಯುವುದೇ ಎನ್ನುವುದನ್ನು ಖಾತರಿಪಡಿಸುವ ಲೋಕ್ ಜಂಬಿಶ್‌ನ ಬದ್ಧತೆಯ ಹಿನ್ನೆಲೆಯಲ್ಲಿ, ಶಾಲೆಗಳು ಮತ್ತು ಅನೌಪಚಾರಿಕ ಕೇಂದ್ರಗಳಲ್ಲಿ ಮಕ್ಕಳ ನಿಯಮಿತ ಭಾಗವಹಿಸುವಿಕೆಯನ್ನು ಯೋಜಿಸಲು ಮತ್ತು ಖಚಿತಪಡಿಸಿಕೊಳ್ಳಲು ಸೂಕ್ಷ್ಮ ಯೋಜನೆಯ ಕಾರ್ಯವಿಧಾನಗಳನ್ನು ಇದು ಒದಗಿಸಿಕೊಟ್ಟಿತು. ಗ್ರಾಮದಲ್ಲಿ ಅಗತ್ಯವಿರುವ ಶೈಕ್ಷಣಿಕ ಮೂಲಸೌಕರ್ಯಗಳು ಲಭ್ಯವಾದ ನಂತರ ಸೂಕ್ಷ್ಮ-ಯೋಜನೆಯು ಸಾಮಾನ್ಯವಾಗಿ ಪ್ರಾರಂಭವಾಯಿತು. ಲೋಕ್ ಜಂಬಿಶ್‌ನಲ್ಲಿ ಸೂಕ್ಷ್ಮ-ಯೋಜನೆಯು ಕುಟುಂಬವಾರು ಆಗಿರುತ್ತದೆ. ಆದರೆ ಮಗು-ವಾರು ಯೋಜನೆ ಮತ್ತು ಮೇಲ್ವಿಚಾರಣೆಯನ್ನು ಮೂಲತಃ ಗ್ರಾಮ ಶಿಕ್ಷಣ ಸಮಿತಿಯ ಸದಸ್ಯರು ಹಾಗೂ ಲೋಕ್ ಜಂಬಿಶ್‌ನ ಸಮೂಹವಾರು ಸಿಬ್ಬಂದಿಗಳು ಗ್ರಾಮದ ಸಮುದಾಯದ ನೆರವಿನಿಂದ ಕೈಗೊಳ್ಳುತ್ತಾರೆ. ಗ್ರಾಮ ಶಿಕ್ಷಣ ಸಮಿತಿಯು ಶಾಲೆಗೆ ದಾಖಲಾಗದಿರುವ ಮಕ್ಕಳನ್ನು ಗುರುತಿಸಿ, ಸಂಬಂಧಪಟ್ಟ ಕುಟುಂಬಗಳನ್ನು ಸಂಪರ್ಕಿಸಿ ಶಾಲೆಯಲ್ಲಿ ಮಕ್ಕಳ ಕ್ರಮಬದ್ಧ ಹಾಜರಾತಿ ಮತ್ತು ಶಾಲೆಯಲ್ಲಿ ಮಕ್ಕಳು ಉಳಿದು ಮುಂದುವರೆಯುವುದರ ಕುರಿತು ಖಚಿತಪಡಿಸಿಕೊಳ್ಳಲು ಚಟುವಟಿಕೆಗಳನ್ನು ಕೈಗೊಂಡಿತು.

ಪ್ರಾಥಮಿಕ ಶಿಕ್ಷಣದ ಪರಿಣಾಮಕಾರಿ ಸಾರ್ವತ್ರೀಕರಣವನ್ನು ಸಾಧಿಸುವಲ್ಲಿ ಕ್ರಮೇಣ ________ಗಳಾಗಿ ನೆರವಾದ ಸೂಕ್ಷ್ಮ-ಯೋಜನೆಗಳ ಎರಡು ಸಾಧನಗಳು:

(i) ಗ್ರಾಮದ ಶೈಕ್ಷಣಿಕ ನೋಂದಣಿಯ ಪುಸ್ತಕ (ii) ದಾಖಲಾಗಿರುವ ಮಕ್ಕಳು ಶಾಲೆಯಲ್ಲಿ ಮುಂದುವರೆಯುತ್ತಿರುವುದರ ಕುರಿತ ದಾಖಲೆ ನಿರ್ವಹಣೆಯ ಪುಸ್ತಕಗಳನ್ನು ಎಲ್ಲ ಶಾಲೆಗಳು ಮತ್ತು ಅನೌಪಚಾರಿಕ ಶಿಕ್ಷಣ ಕೇಂದ್ರಗಳು ನಿರ್ವಹಿಸಿದವು.

ಸೂಕ್ಷ್ಮ ಯೋಜನೆಗೆ ಒತ್ತು ನೀಡಿದ್ದರಿಂದಾಗಿ ವಿವಿಧ ಬ್ಲಾಕ್‌ಗಳಲ್ಲಿ ವಲಸೆ ಕುಟುಂಬಗಳ ಮಕ್ಕಳಿಗೆ ಕಡಿಮೆ ವೆಚ್ಚದ ವಸತಿನಿಲಯಗಳನ್ನು ವ್ಯವಸ್ಥೆ ಮಾಡಿಕೊಡುವುದು, ಬಿಕಾನೇರ್‌ನ ಲುಂಕರನ್ಸರ್ ಎಂಬಲ್ಲಿ ಬಾಲಕಿಯರಿಗಾಗಿ ಬಾಲಿಕಾ ಶಿಬಿರಗಳನ್ನು ಏರ್ಪಡಿಸುವುದು, ಭರತ್‌ಪುರದ ಕಾಮನ್/ಕಾಮಬನ್ ಕಾಮಾನ್ ಎಂಬಲ್ಲಿ ಅಲ್ಪಸಂಖ್ಯಾತ ಮುಸ್ಲಿಮ್ ಮಕ್ಕಳಿಗೆ ವ್ಯವಸ್ಥೆಗಳನ್ನು ಒದಗಿಸುವುದುದೇ ಮುಂತಾದ ವೈವಿಧ್ಯಮಯ ಉಪಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಯಿತು (ರಾಜಗೋಪಾಲ್, 2003).

### ಶಿಕ್ಷಣದ ಗುಣಮಟ್ಟ

ಶಿಕ್ಷಣದ ಗುಣಮಟ್ಟದ ಮೇಲೆ ನೀಡಲಾದ ಹೆಚ್ಚಿನ ಗಮನವು ಶಿಕ್ಷಕರು ಮತ್ತು ಪ್ರಶಿಕ್ಷಕರ ತರಬೇತಿಯನ್ನು ಒಳಗೊಂಡಿದ್ದು ಅದು ಆ ಅವಧಿಯಲ್ಲಿ ಪರಿಚಯಿಸಲಾದ ಕನಿಷ್ಠ ಕಲಿಕಾ ಮಟ್ಟ (MLL– Minimum Learning Level) ವನ್ನು ಆಧರಿಸಿದ ಪಠ್ಯಕ್ರಮ ಹಾಗೂ ಶೈಕ್ಷಣಿಕ ಪ್ರಕ್ರಿಯೆಗಳ ಸುಧಾರಣೆಗಳ ಯೋಜನೆಯನ್ನು ಪ್ರಾರಂಭ ಮಾಡುವ ಮತ್ತು ಉತ್ತೇಜನ ನೀಡುವ ಅಂಶಗಳನ್ನು ಹೊಂದಿತ್ತು.

#### *ಕಲಿಕೆಯ ಕನಿಷ್ಠ ಮಟ್ಟಗಳು*

1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಹೇಳಿರುವುದಕ್ಕೆ ಅನುಗುಣವಾಗಿ ಲೋಕ್ ಜಂಬಿಶ್ ಕೂಡ ಪ್ರತಿ ಹಂತಕ್ಕೂ ಕನಿಷ್ಠ ಮಟ್ಟದ ಕಲಿಕೆ (MLL– Minimum Learning Level)ಯನ್ನು ಸಾಧಿಸುವ ಅಗತ್ಯಕ್ಕೆ ಒತ್ತು ನೀಡಿತು. 1ರಿಂದ 5ನೇ ತರಗತಿಗಳಿಗಾಗಿ 13 ಪಠ್ಯ ಪುಸ್ತಕಗಳು ಮತ್ತು ಅಭ್ಯಾಸ ಪುಸ್ತಕಗಳನ್ನು ಅಭಿವೃದ್ಧಿಪಡಿಸಿ ಬಳಸಲಾಯಿತು. ಪೂರಕ ಬೋಧನಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿ ಶಿಕ್ಷಕರಿಗೆ ತರಬೇತಿ ನೀಡಲಾಯಿತು. ಆರಂಭದಲ್ಲಿ ಕನಿಷ್ಠ ಕಲಿಕಾ ಮಟ್ಟ ಆಧಾರಿತ ಪಠ್ಯಪುಸ್ತಕಗಳು ಮತ್ತು ಬೋಧನಾ ವಿಧಾನಗಳನ್ನು ಆರಂಭದಲ್ಲಿ 1992ರಲ್ಲಿ 45 ಶಾಲೆಗಳಲ್ಲಿ ಮಾತ್ರ ಪರಿಚಯಿಸಲಾಯಿತು.

#### *ಶಿಕ್ಷಕರ ತರಬೇತಿ*

ಗುಣಮಟ್ಟದ ಶಿಕ್ಷಣ ತರಲು ಅಡ್ಡಿಯಾಗಿರುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಶಿಕ್ಷಕರಿಗೆ ತರಬೇತಿ ನೀಡುವುದು ಲೋಕ್ ಜಂಬಿಶ್‌ನಲ್ಲಿ ಪ್ರಮುಖವಾದ ಒಂದು ಕಾರ್ಯತಂತ್ರವಾಗಿತ್ತು. ಶಿಕ್ಷಕರ ಕುರಿತು ಸಮಾಜದಲ್ಲಿ ಸಕಾರಾತ್ಮಕವಾದ ಚಿತ್ರಣ ಮೂಡಿಸಲು ಮತ್ತು ನಿರಂತರವಾದ ತರಬೇತಿಗಳನ್ನು ನಡೆಸಲು ಒತ್ತು ನೀಡಲಾಯಿತು. ತರಬೇತಿಗೆ ಮುನ್ನ ಶಿಕ್ಷಕರೊಂದಿಗೆ ಸಂವಾದವೊಂದನ್ನು ಪ್ರಾರಂಭಿಸಲಾಯಿತು. ತರಬೇತಿಗಳು ಶಿಕ್ಷಕರನ್ನು ಪ್ರೇರೇಪಿಸುವ ಮತ್ತು ಸಂವೇದನಾಶೀಲರನ್ನಾಗಿ ಮಾಡುವುದರ ಜೊತೆಗೆ ಅವರ ಕಲಿಕಾ ಬೋಧನಾ ಪ್ರಕ್ರಿಯೆ[3] ಯನ್ನು ತೀಕ್ಷ್ಣಗೊಳಿಸುವುದರ ಮೇಲೆ ಕೇಂದ್ರೀಕರಿಸಲ್ಪಟ್ಟಿತ್ತು. ಕನಿಷ್ಠ

3. ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಾದ ಸಂಧಾನ್ ಆಂತರಿಕವಾಗಿ ಪಾಲುಗೊಂಡು ಲೋಕ್ ಜಂಬಿಶ್‌ನ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿತು.

ಕಲಿಕಾ ಮಟ್ಟ ಕುರಿತು ಸಾಮರ್ಥ್ಯ ಆಧಾರಿತ ತರಬೇತಿಗಳನ್ನು ಸಹ ಆಯೋಜಿಸಲಾಗಿತ್ತು. ಈ ತರಬೇತಿಗಳಲ್ಲಿ ಸಂಧಾನ್ ತರಬೇತಿ ಮತ್ತು ಸಂಶೋಧನಾ ಸಂಸ್ಥೆಯು ಮಹತ್ತ್ವದ ಪಾತ್ರವನ್ನು ವಹಿಸಿತು.

*ಸಹಜ ಶಿಕ್ಷಣ ಕೇಂದ್ರ (ಅನೌಪಚಾರಿಕ ಶಿಕ್ಷಣ ಕಲಿಕಾ ಕೇಂದ್ರಗಳು)*

ಮುಖ್ಯವಾಹಿನಿಯ ಶಿಕ್ಷಣದಿಂದ ಹೊರಗುಳಿದ ಮಕ್ಕಳ ಅಗತ್ಯಗಳನ್ನು ಪೂರೈಸಲು ಸಹಜ ಶಿಕ್ಷಣ ಕೇಂದ್ರ (SSK) ಗಳನ್ನು ಸ್ಥಾಪಿಸಲಾಯಿತು. ಕೆಲವು ವಾಸ್ತವಿಕ ಆಯ್ಕೆಗಳು ಲಭ್ಯವಿದ್ದಾಗ ಮಾತ್ರ ಶಿಕ್ಷಣ ಮತ್ತು ಕೆಲಸದ ನಡುವಿನ ಸಂಘರ್ಷದ ಆದ್ಯತೆಗಳನ್ನು ಪರಿಹರಿಸಬಹುದು ಎಂಬ ಪ್ರಮೇಯವನ್ನು ಎಸ್‌ಎಸ್ ಕೆ (SSK) ಉಪಕ್ರಮವು ಆಧರಿಸಿದೆ. ಆರಂಭದಲ್ಲಿ ಸಹಜ ಶಿಕ್ಷಣ ಕೇಂದ್ರಗಳನ್ನು ಕೆಲವು ಸರ್ಕಾರಿ ಅನೌಪಚಾರಿಕ ಶಿಕ್ಷಣ ಕೇಂದ್ರ (NFE) ಗಳ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿತ್ತು. ನಂತರದಲ್ಲಿ, ಈ ಕೇಂದ್ರಗಳ ಗಮನವು ಸೂಕ್ತವಾದ ಮತ್ತು ಸುಲಭವಾಗಿ ಹೊಂದಿಕೊಳ್ಳುವ ಹಾಗೂ ಸಮಗ್ರ ಮತ್ತು ಸೃಜನಶೀಲ ಕಲಿಕೆಯನ್ನು ಉತ್ತೇಜಿಸುವ ಶಿಕ್ಷಣವನ್ನು ಒದಗಿಸುವುದರ ಮೇಲೆ ಕೇಂದ್ರೀಕರಿಸಲ್ಪಟ್ಟಿತು.

ಶಿಕ್ಷಣವು ಮಕ್ಕಳ ದೈನಂದಿನ ಬದುಕಿಗೆ ಸಂಬಂಧಿಸಿದೆ. ಹೆಚ್ಚಿನ ಶ್ರಮವು ಬೋಧಕರ ತರಬೇತಿ ಮತ್ತು ಎಸ್‌ಎಸ್ಕೆ (SSK) ಗಳಲ್ಲಿ ಮೂಲಸೌಕರ್ಯ ಸೌಲಭ್ಯಗಳನ್ನು ಖಾತರಿಪಡಿಸುವುದರ ಕಡೆಗೆ ಇತ್ತು. ಬೋಧಕರ ತರಬೇತಿಯು ಬಹುವರ್ಗ ಬೋಧನೆಯ ಸಂದರ್ಭದಲ್ಲಿ ವಿಷಯ ಜ್ಞಾನ ಮತ್ತು ಕಲಿಕಾ ಬೋಧನಾ ಪ್ರಕ್ರಿಯೆಯ ಕೌಶಲಗಳನ್ನು ಹೆಚ್ಚಿಸುವುದರ ಮೇಲೆ ಕೇಂದ್ರೀಕೃತವಾಗಿತ್ತು. ಮಗು-ಕೇಂದ್ರಿತ ವಿಧಾನ, ಸಮಯದ ಸೂಕ್ತ ಹೊಂದಾಣಿಕೆ, ಪಠ್ಯಕ್ರಮವನ್ನು ಮಕ್ಕಳ ಅಗತ್ಯಗಳಿಗೆ ತಕ್ಕ ಹಾಗೆ ಅಳವಡಿಕೆ ಮಾಡಿಕೊಳ್ಳುವುದು ಮತ್ತು ಅವರ ಅನುಭವಗಳನ್ನು ಹೊಸದಾಗಿ ಪಡೆಯಲಿರುವ ಜ್ಞಾನದೊಂದಿಗೆ ಜೋಡಿಸುವುದು ಹಾಗೂ ಸಮುದಾಯದ ವ್ಯಾಪಕ ಭಾಗವಹಿಸುವಿಕೆಯೊಂದಿಗೆ ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ, ವಿಶೇಷವಾಗಿ ಬಾಲಕಿಯರಿಗೆ, ಅವರ ಸಂದರ್ಭಗಳಿಗೆ ಸೂಕ್ತವಾದ ಶಿಕ್ಷಣವನ್ನು ಒದಗಿಸಲು ಸಹಾಯ ಮಾಡಿತು.

**ಸಮತೆಯನ್ನು ಖಾತರಿಪಡಿಸುವುದು**

ಶಿಕ್ಷಣಕ್ಕೆ ಪ್ರವೇಶ ಪಡೆಯುವುದರಲ್ಲಿ ಮತ್ತು ಫಲಿತಾಂಶ ಹೊಂದುವಲ್ಲಿ ಲಿಂಗ ಸಮಾನತೆಯನ್ನು ಖಾತರಿಪಡಿಸುವುದು ಲೋಕ್ ಜಂಬಿಶ್‌ನ ಒಂದು ಆದ್ಯತೆಯಾಗಿತ್ತು. ಲಿಂಗ ಸಮಾನತೆ, ಮಹಿಳೆಯರ ಘನತೆ ಮತ್ತು ಸ್ಥಾನಮಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಬಗೆಹರಿಸದ ಹೊರತು ಸಮಾನಶಿಕ್ಷಣದತ್ತ ಮುನ್ನಡೆಯಲು ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಲಾಗಿತ್ತು.

**ಒಳಗೊಳಿಸಿಕೊಳ್ಳಲಾದ ಪ್ರಮುಖ ಕಾರ್ಯತಂತ್ರಗಳು:**

*ಮಹಿಳಾ ಸಮುಚ್ಚಯಗಳನ್ನು ರೂಪಿಸಲು ಉತ್ತೇಜನ*

ಗ್ರಾಮೀಣ ಮಟ್ಟದಲ್ಲಿ ರೂಪುಗೊಂಡ ಮಹಿಳಾ ಸಮೂಹಗಳು ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿ ಮತ್ತು ಸ್ಥಾನವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಲು ಮತ್ತು ಅವರಿಗಿರುವ ಅಥವಾ ಇಲ್ಲದೇ ಹೋಗುವ ಶೈಕ್ಷಣಿಕ ಅವಕಾಶಗಳ ಸಮಸ್ಯೆಗಳೊಂದಿಗೆ ಒಂದು ಕೊಂಡಿಯಂತೆ ಕೆಲಸ ಮಾಡಿತು. ಶಾಲೆಗಳ ಕಾರ್ಯನಿರ್ವಹಣೆ ಮತ್ತು ಶಿಕ್ಷಕರ ಹಾಜರಾತಿಯ ಮೇಲೆ ಮಹಿಳಾ ಗುಂಪುಗಳ ಸದಸ್ಯರು ಕಟ್ಟುನಿಟ್ಟಿನ ನಿಗಾ ಇರಿಸಿರುವ ಹಲವು ನಿದರ್ಶನಗಳಿವೆ.

*ಅಧ್ಯಾಪಿಕಾ ಮಂಚ್ (ಮಹಿಳಾ ಶಿಕ್ಷಕ/ಶಿಕ್ಷಕಿಯರ ವೇದಿಕೆ)*

ಕನಿಷ್ಠ ಮಟ್ಟದ ಕಲಿಕೆ (MLL– Minimum Learning Level) ಕುರಿತ ತರಬೇತಿಗಳಲ್ಲಿ ಮಹಿಳಾ ಶಿಕ್ಷಕರ ಭಾಗವಹಿಸುವಿಕೆಯ ಪ್ರಮಾಣವು ಕಡಿಮೆ ಇದ್ದುದರಿಂದಾಗಿ ಮಹಿಳಾ ಶಿಕ್ಷಕರ ವೇದಿಕೆ (ಅಧ್ಯಾಪಿಕಾ ಮಂಚ್) ಯ ರಚನೆಗೆ ಕಾರಣವಾಯಿತು. ಅಲ್ಲಿ ಮಹಿಳಾ ಶಿಕ್ಷಕರು ತಮ್ಮ ಅಗತ್ಯಗಳು ಮತ್ತು ಸಮಸ್ಯೆಗಳ ಕುರಿತು ಚರ್ಚಿಸಿದರು. ಈ ವೇದಿಕೆಗಳು ಪ್ರತ್ಯೇಕತೆಯನ್ನು ಮೀರಿ ಹೊರಬಂದು ಸಶಕ್ತರಾಗಲು ಈ ವೇದಿಕೆಗಳು ಒಂದು ಮಾಧ್ಯಮವಾಯಿತು ಎಂಬುದನ್ನು ಮಹಿಳಾ ಶಿಕ್ಷಕರು ಕಂಡುಕೊಂಡರು. ಈ ವೇದಿಕೆಗಳು ಮಹಿಳಾ ಶಿಕ್ಷಕರ ಮತ್ತು ಆ ಮೂಲಕ ಹಳ್ಳಿಗಳಲ್ಲಿನ ಮಹಿಳಾ ಗುಂಪುಗಳು ಸ್ವಂತ ವ್ಯಕ್ತಿತ್ವಗಳನ್ನು ನಿರ್ಮಿಸಿಕೊಳ್ಳಲು ಪ್ರಮುಖ ಸಾಧನಗಳಾದವು.

*ಸಂವಾದಿಕಾ*

ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲು ಸ್ಥಾಪಿತವಾದ ಮತ್ತೊಂದು ವೇದಿಕೆ ಸಂವಾದಿಕಾ. ಕ್ಷೇತ್ರ ಮಟ್ಟದ ಕಾರ್ಯಕ್ರಮಗಳೆಲ್ಲವನ್ನು ಲಿಂಗ ಸಂವೇದನೆಯ ದೃಷ್ಟಿಕೋನದಿಂದ ನೋಡುವುದು ಈ ವೇದಿಕೆಯ ಕಾರ್ಯಕ್ರಮ ಪಟ್ಟಿಯ ಒಂದು ಪ್ರಮುಖ ಅಂಶವಾಗಿತ್ತು.

*ಬಾಲಕಿಯರ ಶಿಕ್ಷಣ ಶಿಬಿರಗಳು (ಬಾಲಿಕಾ ಶಿಕ್ಷಣ್ ಶಿವಿರ್)*

ಶಾಲೆಗೆ ಹೋಗುವ ಅವಕಾಶದಿಂದ ವಂಚಿತರಾಗಿ ಶಾಲೆಯಿಂದ ಹೊರಗುಳಿದಿರುವ ಬಾಲಕಿಯರಿಗಾಗಿ ಬಾಲಕಿಯರ ಶಿಕ್ಷಣ ಶಿಬಿರ (ಬಾಲಿಕಾ ಶಿಕ್ಷಣ್ ಶಿವಿರ್) ಗಳನ್ನು ಪ್ರಾರಂಭಿಸಲಾಯಿತು. ಬಾಲಕಿಯರನ್ನು ಮುಖ್ಯವಾಹಿನಿ ಶಾಲೆಗೆ ಮರಳಿ ಸೇರಿಸಲು ನೆರವಾಗುವ ಒಂದು ಸೇತುಬಂಧವಾಗಿ ಇದು ಕೆಲಸ ಮಾಡಿತು. ವಸತಿಸಹಿತವಾದ ಈ ಶಿಬಿರಗಳಿಗೆ ಬಾಲಕಿಯರನ್ನು ಕಳುಹಿಸುವಂತೆ ಮನವೊಲಿಸುವುದು ಮತ್ತು ಈ ಶಿಬಿರಗಳಲ್ಲಿ ಅವರನ್ನು ಉಳಿಸಿಕೊಳ್ಳುವುದು ರಾಜ್ಯದ ಸಾಮಾಜಿಕ ಮತ್ತು ರಾಜಕೀಯ ಸನ್ನಿವೇಶದಲ್ಲಿ ಇರಿಸಲಾದ ದಿಟ್ಟ ಹೆಜ್ಜೆಗಳೇ ಆಗಿದ್ದವು.

**ಲೋಕ್ ಜಂಬಿಶ್ ನಿಂದ ಪಡೆದುಕೊಳ್ಳಲಾದ ಕಲಿಕೆಗಳು**

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಸ್ಪಷ್ಟ ಉದ್ದೇಶದಿಂದ ರಾಜಸ್ಥಾನ ರಾಜ್ಯದಲ್ಲಿ ಲೋಕ್ ಜಂಬಿಶ್ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಏಕ ಅಂಶದ ಮೂಲಕ ರಾಜ್ಯದೊಳಕ್ಕೆ ಪ್ರವೇಶಿಸಿದ ಈ ಯೋಜನೆಯು ಅದೇ ಸಮಯದಲ್ಲಿ ಹಲವು ಸಮಸ್ಯೆಗಳನ್ನು ಬಹು ಹಂತಗಳಲ್ಲಿ ಕೈಗೆತ್ತಿಕೊಂಡು ನಿಭಾಯಿಸುವ ಗುರಿಯನ್ನು ಹೊಂದಿತ್ತು. ಆಯಾ ಬ್ಲಾಕ್ (ತಾಲ್ಲೂಕಾ)ನ ಎಲ್ಲ ಔಪಚಾರಿಕ ಮತ್ತು ಅನೌಪಚಾರಿಕ ಕಲಿಕಾ ಕೇಂದ್ರಗಳು ಅದರ ಕರ್ಯಾನುಷ್ಠಾನದ ವ್ಯಾಪ್ತಿಯಲ್ಲಿ ಸೇರಿಕೊಂಡವು.

ವಿಕೇಂದ್ರೀಕೃತ ಮಾದರಿಯ ಸ್ಥಳೀಯ ಮಟ್ಟದ ಯೋಜನೆ ಮತ್ತು ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಸ್ಥಿತಿಗತಿಗಳನ್ನು ಅನುಸರಿಸಿ ಸೂಕ್ತವಾದ ಹೊಂದಾಣಿಕೆ ಮಾಡಿಕೊಳ್ಳಲು ಇದ್ದ ಅವಕಾಶವು ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಶಿಕ್ಷಣ ವ್ಯವಸ್ಥೆಯೊಳಕ್ಕೆ ಪ್ರವೇಶಿಸಲು ಅನುವು ಮಾಡಿಕೊಟ್ಟಿತು. ಜೊತೆಗೆ, ಲಿಂಗ ಸಂವೇದನಾಶೀಲತೆಯ

ಕಡೆಗೆ ನೀಡಲಾದ ಹೆಚ್ಚಿನ ಗಮನವು ವಿವಿಧ ಹಂತಗಳಲ್ಲಿ ಸೂಕ್ತವಾದ ಕಾರ್ಯವಿಧಾನಗಳನ್ನು ಜಾರಿಗೆ ತರಲು ಕಾರಣವಾಯಿತು. ಈ ಯೋಜನೆಯು ಶೈಕ್ಷಣಿಕ ಪ್ರಕ್ರಿಯೆಗಳ ಸ್ಥಳೀಯ ಮಟ್ಟದ ನಿರ್ವಹಣೆಯನ್ನು ಜಾರಿಯಲ್ಲಿರಿಸುವ ಮೂಲಕ ಸಮುದಾಯ ಮತ್ತು ಶೈಕ್ಷಣಿಕ ವಿತರಣಾ ವ್ಯವಸ್ಥೆಯ ನಡುವಿನ ಅಂತರವನ್ನು ಕಡಿಮೆ ಮಾಡಲು ಪ್ರಯತ್ನಿಸಿತು.

ಶಿಕ್ಷಣದ ಪೂರೈಕೆ ಮತ್ತು ಬೇಡಿಕೆ ಇವೆರಡೂ ಅಂಶಗಳಿಗೆ ನೀಡಲಾದ ಹೆಚ್ಚಿನ ಗಮನವು ಬಿಡಿಬಿಡಿಯಾಗಿರುವ ಪ್ರಯತ್ನಗಳಿಗೆ ಮಿಗಿಲಾಗಿ ಯಾವುದೇ ಶೈಕ್ಷಣಿಕ ಪ್ರಯತ್ನವು ನಿರಂತರವಾಗಿರಬೇಕು ಎಂಬುದನ್ನು ನೆಲೆಗೊಳಿಸುವಲ್ಲಿ ಸಹಾಯ ಮಾಡಿತು.

ಯೋಜನೆಯು ಸರ್ಕಾರಿ ಸಂಸ್ಥೆಗಳು, ಶಿಕ್ಷಕರು, ಸ್ವಯಂ ಸೇವಾ ಸಂಸ್ಥೆಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಸಮುದಾಯವನ್ನು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯತ್ತ ಸಾಗುವ ಒಂದು ಸಂವಾದಾತ್ಮಕ ಗುಂಪಿನಂತೆ ಕಾರ್ಯನಿರ್ವಹಿಸಲು ಒಂದುಗೂಡಿಸಿತು.

## ಕೊನೆಯ ಮಾತು

2003ರ ನಂತರ ಲೋಕ್ ಜಂಬಿಶ್ ಯೋಜನೆಯು ಉಳಿದು ಮುಂದುವರೆಯಲು ಸಾಧ್ಯವಾಗದಿದ್ದರೂ, ಅದು ಒಂದು ತೀವ್ರತೆಯನ್ನು ಸೃಷ್ಟಿಸಿ ಶಿಕ್ಷಣದಿಂದ ಹೊರಗಿಡಲಾದ ಮಕ್ಕಳನ್ನು ತಲುಪಿತು. ಹಂತಹಂತವಾಗಿ ವಿಕಸನಗೊಂಡ ಈ ಉಪಕ್ರಮವು ಶಿಕ್ಷಣ ನೀಡುವಿಕೆಯಲ್ಲಿ ಇಂತಹ ದೀರ್ಘಕಾಲೀನ ಸಮಸ್ಯೆಗಳನ್ನು ಸಮುದಾಯವೇ ಮುನ್ನಡೆಸಿದ ಪ್ರಕ್ರಿಯೆಗಳ ಮೂಲಕ ಬಗೆಹರಿಸಿತು.

● ಅನುವಾದಕರು: **ಉಷಾ ಅಂಬ್ರೋಸ್** | ಪರಿಶೀಲಕರು: **ಲತಾ ಕೆ ಸಿ**

**ಪರಾಮರ್ಶೆ:**


1 Chaudhary, S.( 2000) *Universal Elementary Education in Rajasthan, A study with focus on Innovative Strategies*, MHRD, GoI and NIEPA, New Delhi

2. Govinda, R.(1998) 'Reaching the Unreached through Participatory Planning'-Study of School Mapping in LokJumbish, IIEP, Paris and NIEPA, New Delhi sourced http//: www.unesco.org/iiep

3. .....( 1997) LokJumbish: An Innovation in Grassroots level Management of Primary education, UNICEF, New York Sourced unesdoc.unesco.org

4. Rajagopal, S .( 2003) 'Operationalising the Right to Education: The LokJumbish Experience in Rajasthan: N.Kabeer, G.B Nambissan and R. Subramanian (eds) *Child Labour and Right to Education in South Asia, Needs versus Rights*, Sage, New Delhi

5. Ramachandran, V.( 2016) 'Legacy of Three Innovative Programmes' in Singh, A.K (ed) *Education and Empowerment in India*: Policies and Practices, Routledge, South Asia Edition , New Delhi



**ಶೋಭಿತಾ** ಅವರು ಜೈಪುರದ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಸಹ ಪ್ರಾಧ್ಯಾಪಕರಾಗಿದ್ದಾರೆ. ಅವರು ಲಿಂಗ ಸಂವೇದನಾ ಶೀಲತೆಯನ್ನು ಸಮಾಜದ ಮುಖ್ಯವಾಹಿನಿಗೆ ತರುವುದು, ಮಹಿಳಾ ಸಬಲೀಕರಣ ಹಾಗೂ ಲಿಂಗತ್ವ ಮತ್ತು ಶಿಕ್ಷಣ ಹಾಗೂ ಪ್ರಜನನ ಆರೋಗ್ಯ ಇವುಗಳಿಗೆ ಸಂಬಂಧಿಸಿದಂತೆ ನೀತಿ ನಿರೂಪಣೆಗಳ ಕುರಿತ ಸಂಶೋಧನೆ, ವಕಾಲತ್ತು ಮತ್ತು ತರಬೇತಿಗಳಿಗೆ ಸಂಬಂಧಿದಂತೆ ಸಾಕಷ್ಟು ಅನುಭವ ಇರುವವರು. ಈ ವಿಷಯಗಳಿಗೆ ಸಂಬಂಧಿಸಿದಂತೆ ಹಲವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ಅವರು ರಾಜಸ್ಥಾನ ರಾಜ್ಯದ ಮತ್ತು ರಾಷ್ಟ್ರ ಮಟ್ಟದ ಮಹಿಳಾ ಚಳುವಳಿಗಳಲ್ಲಿ, ಸ್ವಯಂ ಸೇವಾ ಸಂಸ್ಥೆಗಳು ಮತ್ತು ನಾಗರಿಕ ಸಮಾಜದ ಹಲವು ಚಳುವಳಿಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಅವರನ್ನು shobhita@idsj.org ಇಮೇಲ್ ಐಡಿಯ ಮೂಲಕ ಸಂಪರ್ಕಿಸಬಹುದು.